ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

DKC-27011/199/2019

ಕನ್ನಡ ಭವನ,ಜೆ.ಸಿ. ರಸ್ತೆ,
ಬೆಂಗಳೂರು, ದಿನಾಂಕ:31.08.2019

## ಕಚೇರಿ ಆದೇಶ

ವಿಷಯ: ವಿಶೇಷ ಘಟಕ ಯೋಜನೆಯಡಿ ಸಂಗೀತ-ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಜಾನಪದ, ಯಕ್ಷಗಾನ, ನಾಟಕ ಅಕಾಡೆಮಿಗಳ ಮೂಲಕ ಪ್ರತಿಭಾವಂತ ಯುವಕರನ್ನು ಗುರುತಿಸಿ ಅವರ ನೈಪುಣ್ಯತೆಯನ್ನು ಹೆಚ್ಚಿಸಿ ಪ್ರತಿಷ್ಠಿತ ಅಕಾಡೆಮಿಗಳಲ್ಲಿ ಪ್ರವೇಶ ನೀಡಲು ಧನಸಹಾಯ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 80 ಕಸಧ 2019 ಬೆಂಗಳೂರು ದಿನಾಂಕ:24.07.2019.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 112 ಕಸನಿ 2009, ಬೆಂಗಳೂರು. ದಿ:23.01.2012.

****

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2019-20 ನೇ ಸಾಲಿನ ಕ್ರಿಯಾಯೋಜನೆ ಅನುಮೋದನೆಗೊಂಡಿದೆ. ಕ್ರಿಯಾ ಯೋಜನೆಯಲ್ಲಿ **ವಿಶೇಷ ಘಟಕ ಯೋಜನೆಯಡಿ ಸಂಗೀತ-ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಜಾನಪದ, ಯಕ್ಷಗಾನ ಮತ್ತು ನಾಟಕ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿ/ಯುವ ಕಲಾವಿದರು** ವಿವಿಧ ಕಲೆಗಳಲ್ಲಿ ತರಬೇತಿ ಪಡೆಯಲು ಮತ್ತು ಅವರಿಗೆ ಪರಿಕರಗಳನ್ನು ಒದಗಿಸಲು ಮತ್ತು ಯಾವುದೇ ಕಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ಯುವಕ/ಯುವತಿಯರನ್ನು ಗುರುತಿಸಿ ಅವರ ನೈಪುಣ್ಯತೆಯನ್ನು ಹೆಚ್ಚಿಸಲು ಪ್ರತಿಷ್ಠಿತ ಅಕಾಡೆಮಿ/ಗುರುಗಳಲ್ಲಿ ಪ್ರವೇಶ/ತರಬೇತಿ ಪಡೆಯಲು ಅಕಾಡೆಮಿಗಳಿಗೆ ಅನುದಾನ ಬಿಡುಗಡೆ ಮಾಡಲು ರೂ.30.00 ಲಕ್ಷದ ಅನುದಾನವನ್ನು ಅವಕಾಶ ಮಾಡಿಕೊಳ್ಳಲಾಗಿದೆ.

ಅನುಬಂಧದಲ್ಲಿ ವಿವರಿಸಿರುವ ಅಕಾಡೆಮಿಗಳಿಗೆ ತಲಾ ರೂ.5.00ಲಕ್ಷದಂತೆ ಒಟ್ಟು ರೂ.30.00(ರೂ.ಮೂವತ್ತು ಲಕ್ಷ ಮಾತ್ರ ) ಲಕ್ಷಗಳನ್ನು ಬಿಡುಗಡೆಮಾಡಲು ಈ ಮುಂದಿನಂತೆ ಆದೇಶ.

**ಆದೇಶ:**

XXX

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2019-20ನೇ ಸಾಲಿನಲ್ಲಿ **ವಿಶೇಷ ಘಟಕ ಯೋಜನೆಯಡಿ ಸಂಗೀತ-ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಜಾನಪದ, ಯಕ್ಷಗಾನ ಮತ್ತು ನಾಟಕ ಕ್ಷೇತ್ರಗಳಲ್ಲಿ ಪ್ರವೇಶ/ ತರಬೇತಿ ನೀಡಿ** ಪರಿಕರ ಒದಗಿಸಲು, ಅನುಬಂಧದಲ್ಲಿರುವ ಅಕಾಡೆಮಿಗಳಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು 30.00 ಲಕ್ಷ (ರೂ. ಮೂವತ್ತು ಲಕ್ಷ ಮಾತ್ರ) ಗಳನ್ನು 2019-20 ನೇ ಸಾಲಿನ ವಿಶೇಷ ಘಟಕ ಕ್ರಿಯಾ ಯೋಜನೆ ಲೆಕ್ಕ ಶೀರ್ಷಿಕೆ -2205-00-102-1-44-422ರಡಿ ಖಜಾನೆ(2)ರಲ್ಲಿ ಅನುದಾನದ ಬಿಲ್ಲಿನ ಮೂಲಕ ಭರಿಸಲು ಆದೇಶಿಸಿದೆ.

3/9/19

ಸದರಿ ವೆಚ್ಚವನ್ನು 2019-20ನೇ ಸಾಲಿನ ಲೆಕ್ಕಶೀರ್ಷಿಕೆ 2205-00-102-1-44-422 ರಡಿ ಅನುದಾನ ಬಿಲ್ಲಿನ ಮೇಲೆ ಡ್ರಾ ಮಾಡಿ ಭರಿಸತಕ್ಕದ್ದು.

ಈ ವೆಚ್ಚವನ್ನು 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ-2205-00-102-1-44-422ರಡಿ ಭರಿಸತಕ್ಕದ್ದು. ಈ ಆದೇಶವನ್ನು ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಮಾನ್ಯ ಇಲಾಖಾ ನಿರ್ದೇಶಕರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಷರತ್ತು:

1. ಆಯ್ಕೆಪೂರ್ವದಲ್ಲಿ ರಾಜ್ಯ ಮಟ್ಟದಲ್ಲಿ ಆಯಾ ಅಕಾಡೆಮಿಗಳ ಮುಖಾಂತರವಾಗಿ ಉಚಿತವಾಗಿ ಪತ್ರಿಕಾ ಪ್ರಕಟಣೆ ನೀಡುವುದು.
2. ಯಾವ ಉದ್ದೇಶಕ್ಕೆ ಹಣ ಬಿಡುಗಡೆ ಮಾಡಲಾಗಿದಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
3. ಕರ್ನಾಟಕ ಪಾರದರ್ಶಕ ಅಧಿನಿಯಮ 1999ರನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಸದರಿ ಯೋಜನೆಗೆ ಬಿಡುಗಡೆಯಾದ ಅನುದಾನವನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ (2019-20) ಸಂಪೂರ್ಣವಾಗಿ ವೆಚ್ಚ ಮಾಡತಕ್ಕದ್ದು.
5. ಸಂಗೀತ-ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಜಾನಪದ, ಯಕ್ಷಗಾನ ಮತ್ತು ನಾಟಕ ಕ್ಷೇತ್ರಗಳಲ್ಲಿನ ಪ್ರಕಾರಗಳಲ್ಲಿನ ಮೇಲ್ಕಂಡ ಯೋಜನೆಗೆ ಅಕಾಡೆಮಿ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
6. ಸಂಪೂರ್ಣ ಅನುದಾನ ಆರ್ಥಿಕ ವರ್ಷದ ನಿಗಧಿತ ಅವಧಿಯೊಳಗೆ ಬಳಕೆಯಾಗದೆ ಉಳಿದಿದ್ದಲ್ಲಿ ಕರ್ನಾಟಕ ಅನುಸೂಚಿತ ಜಾತಿ/ಪಂಗಡದ ಅಧಿನಿಯಮ-2014ರ ಅನ್ವಯ ದೌರ್ಜನ್ಯ ಪ್ರಕರಣ ದಾಖಲಿಸಲು ಅವಕಾಶವಿರುತ್ತದೆ.
7. ಬಿಡುಗಡೆಯಾದ ಅನುದಾನಕ್ಕೆ ಸೂಕ್ತ ಹಣಬಳಕೆ ಪ್ರಮಾಣಪತ್ರ ಹಾಗೂ ವೆಚ್ಚಪಟ್ಟಿಯನ್ನು ಕಳುಹಿಸತಕ್ಕದ್ದು.

ನಿರ್ದೇಶಕರಿಂದ ಕರಡು ಅನುಮೋದನೆಗೊಂಡಿದೆ.

31/8/2019

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಪ್ರತಿ:

1. ಸಂಬಂಧಪಟ್ಟ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮಾಹಿತಿಗಾಗಿ.
2. ಲೆಕ್ಕಪತ್ರ ಅಧಿಕಾರಿಗಳು, ಲೆಕ್ಕಪತ್ರ ಶಾಖೆ, ಕೇಂದ್ರಕಚೇರಿ, ಬೆಂಗಳೂರು. ಅಗತ್ಯ ಕ್ರಮಕ್ಕಾಗಿ.
3. ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
4. ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
5. ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
6. ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
7. ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
8. ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿಗಳಿಗೆ, ಬೆಂಗಳೂರು. ಅನುದಾನದ ಬಿಲ್ಲನ್ನು ನೀಡಲು
9. ಜಂಟಿ ನಿರ್ದೇಶಕರು, ರಾಜ್ಯಹುಜೂರ್ ಖಜಾನೆ, ಕೇಂದ್ರ ಕಚೇರಿ, ಬೆಂಗಳೂರು.
10. ವಿಷಯ ನಿರ್ವಾಹಕರು ಟಿ.ಎನ್. ಎಂ.ಸಿ. ಶಾಖೆ ಕೇಂದ್ರಕಚೇರಿ, ಬೆಂಗಳೂರು. ಟಿ.ಎನ್.ಎಂ.ಸಿ. ನಮೂದಿಗಾಗಿ
11. ಕಡತಕ್ಕೆ.

ಅನುಬಂಧ

ವಿಶೇಷ ಘಟಕ ಯೋಜನೆಯಡಿ ವಿವಿಧ ಅಕಾಡೆಮಿಗಳಿಗೆ ಬಿಡುಗಡೆಮಾಡಬೇಕಾಗಿರುವ ಅನುದಾನದವಿವರ

| ಕ್ರ. ಸಂ. | ಅಕಾಡೆಮಿಯಹೆಸರು | ಅನುಷ್ಠಾನಗೊಳಿಸುವ ಕಾರ್ಯಕ್ರಮ | ಮೊತ್ತ | ರೆಸಿಪಿಯಂಟ್ ಐಡಿ |
|---|---|---|---|---|
| 1. | ರಿಜಿಸ್ಟ್ರಾರ್<br>ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ<br>ಬೆಂಗಳೂರು | ವಿವಿಧ ಕಲೆಗಳಲ್ಲಿ ವಿಶೇಷ ಘಟಕ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಮತ್ತು ಪರಿಕರಗಳನ್ನು ಒದಗಿಸಿ ಪ್ರತಿಷ್ಠಿತ ಅಕಾಡೆಮಿ/ಗುರುಗಳಲ್ಲಿ ಪ್ರವೇಶ/ತರಬೇತಿ ಪಡೆಯಲು | 5,00,000/- | 1000193026 |
| 2. | ರಿಜಿಸ್ಟ್ರಾರ್<br>ಕರ್ನಾಟಕ ಲಲಿತಕಲಾ ಅಕಾಡೆಮಿ<br>ಬೆಂಗಳೂರು | | 5,00,000/- | 1000193020 |
| 3. | ರಿಜಿಸ್ಟ್ರಾರ್<br>ಕರ್ನಾಟಕ ಶಿಲ್ಪಕಲಾ ಅಕಾಡೆಮಿ<br>ಬೆಂಗಳೂರು | | 5,00,000/- | 1000193021 |
| 4. | ರಿಜಿಸ್ಟ್ರಾರ್<br>ಕರ್ನಾಟಕ ಜಾನಪದ ಅಕಾಡೆಮಿ<br>ಬೆಂಗಳೂರು | | 5,00,000/- | 1000193025 |
| 5. | ರಿಜಿಸ್ಟ್ರಾರ್<br>ಕರ್ನಾಟಕ ಯಕ್ಷಗಾನ ಅಕಾಡೆಮಿ<br>ಬೆಂಗಳೂರು | | 5,00,000/- | 1000193018 |
| 6. | ರಿಜಿಸ್ಟ್ರಾರ್<br>ಕರ್ನಾಟಕ ನಾಟಕ ಅಕಾಡೆಮಿ<br>ಬೆಂಗಳೂರು | | 5,00,000/- | 1000193024 |
| | | ಒಟ್ಟು | **30,00,000/-** | |

(ರೂಪಾಯಿ ಮೂವತ್ತು ಲಕ್ಷ ಮಾತ್ರ)

ನಿರ್ದೇಶಕರಿಂದ ಕರಡು ಅನುಮೋದನೆಗೊಂಡಿದೆ.

31/8

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.